# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1030 (1294) |
| ಸದಸ್ಯರ ಹೆಸರು | ಶ್ರೀ ಜಿ.ರಘು ಆಚಾರ್ [ಸ್ಥಳೀಯ ಸಂಸ್ಥೆಗಳ ಕ್ಷೇತ್ರ] |
| ಉತ್ತರಿಸಬೇಕಾದ ದಿನಾಂಕ | 15-03-2021 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಪ್ರಶ್ನೆ | ಉತ್ತರ |
|---|---|
| **ಅ)** ಪ್ರಸಕ್ತ 2020-2021ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿರುವ ಎಲ್ಲಾ ಖಾಸಗಿ ಶಾಲೆಗಳು ಸರ್ಕಾರದ ನಿಯಮಾವಳಿ ಅನುಸರಿಸಿ ಶೇ30 ರಷ್ಟು ಶುಲ್ಕ ಮನ್ನಾ ಮಾಡಿದೆಯೇ; | ಹೌದು, |
| **ಆ)** ಶಿಕ್ಷಣ ಶುಲ್ಕದಲ್ಲಿ ಶೇ.30 ರಷ್ಟು ಶುಲ್ಕವನ್ನು ಮನ್ನಾ ಮಾಡದೇ ಪೂರ್ತಿ ಹಣ ವಸೂಲಿ ಮಾಡಿರುವ ಶಾಲೆಗಳ ವಿರುದ್ಧ ಶಿಕ್ಷಣ ಇಲಾಖೆ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ:ಇಪಿ.33.ಪಿಜಿಸಿ.2021, ಬೆಂಗಳೂರು ದಿನಾಂಕ:29-01-2021ರನ್ವಯ 2020-21ನೇ ಸಾಲಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶುಲ್ಕಗಳ ಪಡೆಯುವ/ಪಾವತಿಸುವ ಕುರಿತಂತೆ ಶಾಲೆ/ಪೋಷಕರಿಂದ ತಕರಾರು/ದೂರುಗಳು ಸ್ವೀಕೃತಿಯಾದಲ್ಲಿ, ಈ ದೂರುಗಳನ್ನು ಇತ್ಯರ್ಥಪಡಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ; ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿ7(2) ಪ್ರಾಶಿಅ.ಇತರೆ.80/2020-21, ದಿನಾಂಕ:02/02/2021ರಲ್ಲಿ ಬೆಂಗಳೂರು ನಗರಕ್ಕೆ ವಲಯವಾರು ನಿರ್ದೇಶಕರು/ಸಹ ನಿರ್ದೇಶಕರುಗಳನ್ನು ಹಾಗೂ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು/ಡಯಟ್ ಪ್ರಾಂಶುಪಾಲರು ಸೇರಿದಂತೆ ಹಿರಿಯ ಅಧಿಕಾರಿಗಳನ್ನು ಒಳಗೊಂಡಂತೆ ಅಧ್ಯಕ್ಷರನ್ನಾಗಿಸಿ, ಅಧಿಕಾರಯುಕ್ತ ಸಮಿತಿಗಳನ್ನು ರಚಿಸಿ ತಕರಾರು ಅರ್ಜಿಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಲು ಸೂಚಿಸಲಾಗಿದೆ. |

| | |
|---|---|
| **ಇ)** ಬೆಂಗಳೂರು ನಗರದ ಸರ್ಜಾಪುರ ಹೋಬಳಿಯಲ್ಲಿರುವ ಒಕ್ರೀಡ್ಜ್ ಇಂಟರ್‌ನ್ಯಾಷನಲ್ ಶಾಲೆ ಒಳಗೊಂಡಂತೆ ಹಲವು ಖಾಸಗಿ ಶಾಲೆಗಳು ಈ ನಿಯಮ ಉಲ್ಲಂಘಿಸಿರುವ ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಒಕ್ರೀಡ್ಜ್ ಇಂಟರ್ ನ್ಯಾಷನಲ್ ಶಾಲೆಯ ವಿರುದ್ಧ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. ಶಾಲಾ ಶುಲ್ಕಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |
| **ಈ)** ಹಾಗಿದ್ದಲ್ಲಿ, ಅಂತಹ ಶಾಲೆಗಳ ಆಡಳಿತ ಮಂಡಳಿ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು) | ಉಪ ಪ್ರಶ್ನೆ (ಆ)ರಲ್ಲಿ ಉತ್ತರಿಸಿದೆ. |

**ಇಪಿ 89 ಪಿಜಿಸಿ 2021**

S. Su

[ ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.